# ಟ್ರಯಲ್ ರೂಂನ ಸೆಲ್ಫಿ ಲೋಕ

**ಮೊಬೈಲ್ ತಲೆಮಾರಿನ ಸ್ಮಾರ್ಟ್ ಹುಡುಗ ಹುಡುಗಿಯರ ಲೋಕ ಪೋಷಕರ ಪಾಲಿಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆ?**

■ ಸ್ವಯಂಪ್ರಭಾ



ಕೆಲವೊಮ್ಮೆ ನಿಜಕ್ಕೂ ಎಲ್ಲವೂ ಕೈ ಮೀರಿ ಹೋಗುತ್ತಿದೆಯೆಂದೋ, ಅಥವಾ ಇದೆಲ್ಲ ಏನೆಂದು ಅರ್ಥವಾಗುತ್ತಿಲ್ಲವಲ್ಲ ಎಂದೋ ಪೋಷಕರ ಮನಸಿನಲ್ಲಿ ಸಣ್ಣ ನಡುಕವೊಂದು ಹುಟ್ಟುವುದುಂಟು. ತಲೆಮಾರುಗಳ ನಡುವಿನ ಅಂತರವು, ನಿಯಂತ್ರಣವೆಂಬ ಸೂತ್ರವನ್ನು ಪೋಷಕರಿಂದ ಕಿತ್ತುಕೊಂಡಂತೆ ಭಾಸವಾಗುತ್ತಿದೆ ಎಂದು ಅನೇಕರು ಅಚ್ಚರಿಪಡುತ್ತಾರೆ.

ಲಿಂಗರಾಜ್ ಅವರ ಮಗ ಶ್ರೀಕಾಂತ್ ಎಂಟನೇ ತರಗತಿಯ ಹುಡುಗ. ತನ್ನದೇ ಆದ ಸ್ವಂತ ಮೊಬೈಲ್ ಇಲ್ಲದ, ಆದರೆ ಮೊಬೈಲ್‌ನ ಕಿತಾಪತಿಗಳನ್ನೂ, ಬಳಕೆಯ ವಿಧಾನಗಳನ್ನೂ ಅರೆದು ಕುಡಿದಿರುವ ಚೂಟಿ ಹುಡುಗ. ಮಗನ ಧ್ವನಿಯೊಡೆಯುತ್ತಿದೆಯೇನೋ ಎಂಬ ನಿರೀಕ್ಷೆಯಲ್ಲಿ ಲಿಂಗರಾಜ್ ಇದ್ದರೂ, ಈ ಸಣ್ಣ ಹುಡುಗ ಶ್ರೀಕಾಂತ್ ತನ್ನದೇ ಆದ ಒಂದು ಜಗತ್ತನ್ನು ಸೃಷ್ಟಿಸಿಕೊಂಡಿದ್ದಾನೆ ಎಂದೂ ಅವರಿಗೆ ಆಗಾಗ ಅನಿಸಲಾರಂಭಿಸಿತು.

ವಿಷಯ ಬಹಳ ಸರಳ. ಪ್ರತೀ ಬಾರಿ ಶಾಲೆಗೆ ರಜೆಯಿದ್ದಾಗ ಶ್ರೀಕಾಂತ್ ಒಂದು ಬಟ್ಟೆಯಂಗಡಿಗೆ ಹೋಗಿ, ಒಂದಿಷ್ಟು ಬಟ್ಟೆಗಳನ್ನು ಆಯ್ಕೆ ಮಾಡಿಕೊಂಡು ಟ್ರಯಲ್ ರೂಮಿನೊಳಗೆ ಸೇರಿಕೊಂಡುಬಿಡುತ್ತಿದ್ದ. ಹೊಸ ಅಂಗಿಗಳು ತನಗೆ ಹೊಂದುತ್ತವೆಯೇ ಎಂದು ಹಾಕಿನೋಡುವ ನೆಪದಲ್ಲಿ ಅಲ್ಲಿರುವ ಟ್ರಯಲ್ ರೂಮ್‌ನಲ್ಲಿರುವ ದೊಡ್ಡ ಕನ್ನಡಿಯ ಮುಂದೆ ಸೆಲ್ಫಿಗಳನ್ನು ತೆಗೆದುಕೊಳ್ಳುತ್ತಿದ್ದ. ಇಷ್ಟೇ ಆದರೆ ಪರವಾಗಿಲ್ಲ, ಏನೋ ಹುಡುಗು ಬುದ್ಧಿ ಎಂದು ಸುಮ್ಮನಿರಬಹುದು. ಆದರೆ, ಮಕ್ಕಳು ಫೋಟೊ ಅಥವಾ ವಿಡಿಯೊಗಳನ್ನು ತೆಗೆದ ಬಳಿಕವೇ ಸಮಸ್ಯೆ ಇನ್ನಷ್ಟು ಬಿಗಡಾಯಿಸುವುದು. ಆ ಫೋಟೊಗಳನ್ನು ಕ್ಯಾನುವಾದಲ್ಲಿ ಅಥವಾ ಫೋಟೊ ಎಡಿಟರ್‌ನಲ್ಲಿ ಕೊಲಾಜ್ ಮಾಡಿ, ಅದಕ್ಕೆ ತಕ್ಕಂತಹ ಹಾಡನ್ನು ಹಿನ್ನೆಲೆ ಸಂಗೀತವಾಗಿ ಬಳಸಿ ಇನ್‌ಸ್ಟಾಗ್ರಾಂ ಅಕೌಂಟ್‌ಗೆ ಅಪ್‌ಲೋಡ್ ಮಾಡುವುದಕ್ಕೆ ಮತ್ತೆ ಅರ್ಧ ದಿನ ವ್ಯಯವಾಗುತ್ತಿತ್ತು. ವಾರಕ್ಕೊಂದು ದಿನ ಸಿಗುವ ರಜೆಯಲ್ಲಿ ತನ್ನ ವೈಯಕ್ತಿಕ ಕೆಲಸಗಳನ್ನು ಮಾಡಿ ಮುಂದಿನ ವಾರದ ಪಾಠ ಪ್ರವಚನಗಳಿಗೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವ ಗೊಡವೆಗೆ ಹೋಗದ ಶ್ರೀಕಾಂತ್, ಫೋಟೊ ಮತ್ತು ವಿಡಿಯೊಗಳ ಸಲುವಾಗಿ ಸಿಕ್ಕಾಪಟ್ಟೆ ಶ್ರಮ ವ್ಯರ್ಥ ಮಾಡುತ್ತಿದ್ದಾನೆ ಎಂಬ ಚಿಂತೆ ಅಪ್ಪನದು.

ನಂದಿನಿ ಅವರ ಮಗಳು ಶಿಖಾ ಕೂಡ ಇದೇ ರೀತಿ ವರ್ತಿಸುತ್ತಿದ್ದಳು. ಆನ್‌ಲೈನ್‌ನಲ್ಲಿ ಬಟ್ಟೆಗಳಿಗೆ ಆರ್ಡರ್ ಮಾಡಿ, ಅವುಗಳಿಗಾಗಿ ಕಾದು ಕುಳಿತುಕೊಳ್ಳುತ್ತಿದ್ದಳು. ಅವು ಬಂದ ತಕ್ಷಣವೇ ಧರಿಸಿ ನೋಡಿ, ಒಂದೆರಡು ಫೋಟೊ ಕ್ಲಿಕ್ಕಿಸಿ ಮತ್ತೆ 'ರಿಟರ್ನ್' ಎಂದು ಬಟನ್ ಒತ್ತಿ ವಾಪಸ್ ಕಳಿಸಿಬಿಡುತ್ತಿದ್ದಳು. ಟ್ರಯಲ್ ರೂಮ್‌ನೊಳಗೆ ವೈವಿಧ್ಯಮಯ ದಿರಿಸುಗಳಲ್ಲಿ ತನ್ನ ಸೆಲ್ಫಿ ಫೋಟೊಗಳನ್ನೂ ತೆಗೆದುಕೊಂಡು ಬರುವ ಅವಳು, ಇನ್‌ಸ್ಟಾಗ್ರಾಂ ಅಥವಾ ವಾಟ್ಸಾಪ್‌ಗೆ ಅಪ್‌ಲೋಡ್ ಮಾಡಿದ ಬಳಿಕ, ಅವುಗಳನ್ನು ಎಷ್ಟು ಮಂದಿ ನೋಡಿದರು ಎಂಬ ಕುತೂಹಲದಲ್ಲಿ ಇರುತ್ತಿದ್ದಳು. ತನ್ನ ಪೋಸ್ಟ್‌ಗೆ ಬಂದಿರುವ ಲೈಕ್‌ಗಳೆಷ್ಟು, ಕಮೆಂಟ್ ಬಾಕ್ಸ್‌ನಲ್ಲಿ ಏನೇನಿದೆ ಅಥವಾ ವಾಟ್ಸಾಪ್ ಸ್ಟೇಟಸ್ ಅನ್ನು ಯಾರೆಲ್ಲ ನೋಡಿದ್ದಾರೆ ಎಂಬ ಲೆಕ್ಕಾಚಾರಗಳಲ್ಲಿ ಅವಳು ಸಮಯ ಕಳೆಯುತ್ತಿದ್ದಳು. ತಾನು ಬಯಸಿದ ಯಾವುದೋ ಕಮೆಂಟ್ ಯಾಕಿನ್ನೂ ಬಂದಿಲ್ಲವೆಂದು ಚಿಂತಾಕ್ರಾಂತಳಾಗಿ ಕುಳಿತುಬಿಡುತ್ತಿದ್ದಳು.

ತಂತ್ರಜ್ಞಾನವು ಇಂದು ಸಾಕಷ್ಟು ವಿಕಾಸವಾಗಿದೆ. ಅದು ವೇಗವಾಗಿ ಕೆಲಸಗಳನ್ನು ಮಾಡಿಕೊಳ್ಳಲು ನಮಗೆ ಅನುವು ಮಾಡಿಕೊಡುತ್ತಿದೆ. ಆದರೆ ಆ ವೇಗವರ್ಧಕದಂತಹ ಸೌಕರ್ಯವನ್ನು ನಮ್ಮ ಮಕ್ಕಳು ಯಾವ ವಿಚಾರಗಳಿಗೆ ಬಳಸಿಕೊಳ್ಳುತ್ತಾರೆ ಎಂದು ಅರಿಯದೇ ಪೋಷಕರು ಕಂಗಾಲಾಗುವುದುಂಟು. ಸೆಲ್ಫಿ ಫೋಟೊಗಳನ್ನು ತೆಗೆಯುವ ಹವ್ಯಾಸ ಆರಂಭವಾದಾಗ, ಸಾಮಾಜಿಕವಾಗಿ ಆ ಬಗ್ಗೆ ಟೀಕೆ–ಪ್ರತಿರೋಧಗಳು ವ್ಯಕ್ತವಾಗುತ್ತಿದ್ದವು. ಆದರೆ, ಇತ್ತೀಚೆಗೆ ಸೆಲ್ಫಿ ಎನ್ನುವುದು ದೊಡ್ಡವರ ಜೀವನದ ಒಂದು ಭಾಗವೇ ಆಗಿಹೋಗಿದೆ. ಮಾರುಕಟ್ಟೆ ಕ್ಷೇತ್ರದಲ್ಲಿ ಕೆಲಸ ಮಾಡುವ ಎಕ್ಸಿಕ್ಯುಟಿವ್ ಸಿಬ್ಬಂದಿಗೆ ಸೆಲ್ಫಿ ತೆಗೆದು, ಅದನ್ನು ಜಿಯೋಟ್ಯಾಗ್ ಮಾಡಿ ತಮ್ಮ ಬಾಸ್‌ಗೆ ಕಳುಹಿಸುವುದು ಅವರ ಉದ್ಯೋಗದ ಭಾಗವೇ ಆಗಿದೆ.

ಹೆಚ್ಚು ಕ್ಲಿಕ್‌ಗಳು ಮತ್ತು ಲೈಕ್‌ಗಳು ತಮ್ಮ ಸೃಜನಶೀಲತೆಯ ಭಾಗವೆಂದು ಮಕ್ಕಳು ಭಾವಿಸುತ್ತಾರೆ. ಇವೆಲ್ಲ ತಮ್ಮ ಮಕ್ಕಳ ಜೀವನದಲ್ಲಿ ಯಾಕೆ ಮುಖ್ಯವೆಂದೇ ಅರ್ಥವಾಗದ ಪೋಷಕರು ಕಕ್ಕಾಬಿಕ್ಕಿಯಾಗುತ್ತಾರೆ. ಮೊಬೈಲ್‌ಗಳನ್ನು ನಿರ್ವಹಿಸುವುದನ್ನು ಮಕ್ಕಳು ಕಲಿಯಬೇಕಾಗಿದೆ ಎಂಬ ರಿಯಾಯಿತಿಯೊಂದಿಗೆ ಅನೇಕರು ಮಕ್ಕಳ ಕೈಗೆ ಒಂದು ಫೋನ್ ಕೊಟ್ಟುಬಿಡುತ್ತಾರೆ. ಜೊತೆಗೆ, ಆ ಫೋನನ್ನು ನಿರ್ದಿಷ್ಟ ಗಂಟೆಗಳ ಕಾಲ ಮಾತ್ರ ಬಳಸಬೇಕು ಎಂಬ ಒಂದು ಹುಸಿನಿಯಮವನ್ನೂ ಮಾಡುತ್ತಾರೆ. ಮೊಬೈಲ್‌ನಲ್ಲಿ ವಿಡಿಯೊಗಳನ್ನು ಅಪ್‌ಲೋಡ್ ಮಾಡಿದ ಬಳಿಕ ಕೈಯಲ್ಲಿ ಪಾಠಪುಸ್ತಕವನ್ನೋ, ನೋಟ್ಸ್ ಪುಸ್ತಕವನ್ನೋ ಹಿಡಿಯುವ ಪುಟಾಣಿಗಳು ಮಾತ್ರ, 'ಬೆಳಿಗ್ಗೆ ಅಪ್‌ಲೋಡ್ ಮಾಡಿದ ವಿಡಿಯೊಗೆ ಎಷ್ಟು ಲೈಕ್‌ಗಳು ಬಿದ್ದಿರಬಹುದು?' ಎಂಬ ಕಲ್ಪನಾಲೋಕದಲ್ಲಿ ಕಳೆದುಹೋಗುತ್ತಿದ್ದಾರೆ. ಕಾಲದ ಪ್ರವಾಹವು ಎತ್ತ ಸಾಗುತ್ತಿದೆ ಎಂಬ ಕುತೂಹಲವಷ್ಟೇ ಪೋಷಕರ ಪಾಲಿಗೆ ಉಳಿದಿದೆ.

ಪ್ರತಿಕ್ರಿಯಿಸಿ: feedback@sudha.co.in